# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರ | ತಕರಾರುದಾರರು |
|---|---|
| 1)ಚಂದ್ರಪ್ಪ ತಾವರಗುಂದಿ ತಂದೆ ಲಕ್ಕಪ್ಪ,<br>2)ಶಿವಪ್ಪ ತಾವರಗುಂದಿ ತಂದೆ ಲಕ್ಕಪ್ಪ,<br>ಶಾಕಾರ ಗ್ರಾಮ, ಹಾವೇರಿ ತಾ. | ಚಂದ್ರಪ್ಪ ತಂದೆ ಲಕ್ಕಪ್ಪ ತಾವರಗುಂದಿ,<br>ಶಾಕಾರ ಗ್ರಾಮ, ಹಾವೇರಿ ತಾ. |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹೊಳಲು | 2/ಬಿ/1 | 3-64 | ಖುಷ್ಕಿ |

*****

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹೊಳಲು ಗ್ರಾಮದ ಸ.ನಂ.2/ಬಿ/1 ವಿ:3-64 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ಹಾವೇರಿ ತಾಲೂಕಿನ ಶಾಕಾರ ಗ್ರಾಮ ನಿವಾಸಿಯಾದ ಚಂದ್ರಪ್ಪ ತಾವರಗುಂದಿ ತಂದೆ ಲೇಟ್ ಲಕ್ಕಪ್ಪ ಮತ್ತು ಶಿವಪ್ಪ ತಾವರಗುಂದಿ ತಂದೆ ಲೇಟ್ ಲಕ್ಕಪ್ಪ ಇವರು ದಿನಾಂಕ 24-07-2015 ರಂದು ಮೈನರ್ ಗಾರ್ಡಿಯನ್ ತೆಗೆದು ಹಾಕಲು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿನಾಂಕ 30-07-2015 ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:27/08-2015 ರಂದು ಚಂದ್ರಪ್ಪ ತಾವರಗುಂದಿ ತಂದೆ ಲಕ್ಕಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ಸಂಖ್ಯೆ 7/2015-16 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:26-10-2015 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರರು ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರರು ಮತ್ತು ತಕರಾರುದಾರರು ವಿಚಾರಣೆಗೆ ಹಾಜರಾಗಿ ಈಗ ಪಹಣಿಯಲ್ಲಿರುವ ಹೆಸರನ್ನೇ ಮುಂದುವರೆಸಲು ಮೌಖಿಕವಾಗಿ ಕೋರಿರುತ್ತಾರೆ. ಉಭಯರು ಸಹೋದರರಾಗದ್ದು, ಮೈನರ್ ಗಾರ್ಡಿಯನ್ ತಾಯಿ ಪಕ್ಕೀರವ್ವ ಇರುವುದನ್ನು ಹಾಗೆಯೇ ಮುಂದುವರೆಸುವಂತೆ ಮೌಖಿಕವಾಗಿ ಕೋರಿರುವುದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/14/2015-16 ದಿನಾಂಕ:04-04-2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ನಂ.7/2015-16 ರ ಪ್ರಕರಣದಲ್ಲಿ ಉಭಯರ ಕೋರಿಕೆಯಂತೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ.

ಶಿವಪ್ಪ ತಾವರಗುಂದಿ

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಉಪ ತಹಶೀಲ್ದಾರರು ನಾಡ ಕಾರ್ಯಾಲಯ ಹಿರೇಹಡಗಲಿ

ಪ್ರತಿಯನ್ನು

1. ಅರ್ಜಿದಾರರು ಮತ್ತು ತಕರಾರುದಾರರು
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.